ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **758 /2018**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಕೃಷ್ಣ ಕುಮಾರ್ | ಸಿ.ಡಬ್ಲ್ಯೂ | ಃ 04 |
| ತಂದೆ ಹೆಸರು | ಃ ವೆಂಕಟೇಶ್ | ಪಿ.ಡಬ್ಲ್ಯೂ | ಃ 03 |
| ವಯಸ್ಸು | ಃ 48 ವರ್ಷ | ಪ್ರಮಾಣೀಕರಿಸಿದ ದಿಃ | 02/08/2025 |
| ವೃತ್ತಿ | ಃ ಆಟೋ ಚಾಲಕ | | |
| ವಾಸ | ಃ ಕಡವಿನ ಕೋಟೆ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನ ಗೊತ್ತಿಲ್ಲ. ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿ ಹಾಕಿಸಿಕೊಂಡಿರುತ್ತಾರೆ. ಆ ದಾಖಲೆ ಏನೆಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಿತರು. ಆರೋಪಿಯು ಹೊಳೆನರಸೀಪುರದವರು. ಸಾಕ್ಷಿಗೆ ನಿ ಪಿ 2 ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಸ್ಥಳ ಮಹಜರ್ ನ್ನು ಪರಿಶಿಲಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 20.06.2018 ರಂದು ಸಮಯ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ನಾನು, ಚಾ ಸಾ 1 ಮತ್ತು ಚಾ ಸಾ 3 ರವರು ಹೊಳೆನರಸೀಪುರದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಬಳಿ ಇರುವ ಆಟೋ ನಿಲ್ದಾಣದ ಹತ್ತಿರ ಸ್ಥಳ ಮಹಜರ್ ಗೆ ಹೋಗಿರುತ್ತೇವೆ. ಸದರಿ ಸ್ಥಳವು ಆಟೋಗಳನ್ನು ನಿಲ್ಲಿಸುವ ಸ್ಥಳವಾಗಿರುತ್ತದೆ. ಸದರಿ ಸ್ಥಳದ ಬಳಿ ಮೋಟಾರು ಸೈಕಲ್ ನಿಲ್ಲಿಸಲು 10 ಅಡಿ ಸ್ಥಳವಿರುತ್ತದೆ. ಸದರಿ ಸ್ಥಳದ ಉತ್ತರಕ್ಕೆ ಆಟೋ ಮಾಲೀಕರ ಧ್ವಜ ಸ್ಥಂಭ ಇರುತ್ತದೆ. ಸದರಿ ಸ್ಥಳದಲ್ಲಿ ಪೊಲೀಸರು ಸ್ಥಳ ಮಹಜರನ್ನು ಮಾಡಿದರು.

2. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ  ಐ ಎಲ್ ಎಸ್ ವಕೀಲರಿಂದಃ

ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಬಳಿ ಇರುವ ಆಟೋ ನಿಲ್ದಾಣದ ಬಳಿ ನನ್ನನ್ನು ಯಾವ ಕಾರಣಕ್ಕೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಹೇಳಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ.

ಪಾಟೀ ಸವಾಲು ಮುಕ್ತಾಯಃ

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ

ಸಾಕ್ಷಿಗೆ ನಿ ಪಿ ಅಮಾನತ್ ಮಹಜರ್ ನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ ಎಂದು ಗುರುತಿಸಲಾಯಿತು.